# ಭೂತಾಯಿಯ ಸುಪುತ್ರಿ!



■ ಪ್ರವೀಣ ಕುಲಕರ್ಣಿ

ಜನಕ್ ಪಲ್ಟಾ ಮೆಗಿಲಿಗನ್. ಭೂತಾಯಿಯ ಅತ್ಯಂತ ಹೆಮ್ಮೆಯ ಪುತ್ರಿಯಾದ ಈ ಸಾಧಕಿಯ ಹೆಸರು ಕೇಳಿದರೇ ಸಾಕು, ಮೈನವಿರೇಳುತ್ತದೆ. 'ಬೆಂಕಿಯಲ್ಲಿ ಅರಳಿದ ಈ ಹೂವು' ಹರಡಿದ ಪರಿಮಳವನ್ನು ಆಸ್ವಾದಿಸುತ್ತಾ ಹೋದರೆ ಮನಸ್ಸು ತುಂಬಿ ಬರುತ್ತದೆ. ಹೃದಯವೂ ತಲೆಬಾಗಿ ಅವರಿಗೊಂದು ನಮಸ್ಕಾರ ಹೇಳುತ್ತದೆ. ನಮ್ಮ ಜನಕ್ ಅಜ್ಜಿ ಮಾಡಿದ ಸಾಧನೆಯನ್ನು ಬೇರೆ ಯಾರಾದರೂ ಮಾಡಲು ಏಳೇಳು ಜನ್ಮಗಳೇ ಬೇಕೇನೊ. ದಶಕಗಳಿಂದ ಸುಸ್ಥಿರ ಅಭಿವೃದ್ಧಿಯ ಮಾಯಾದಂಡವನ್ನು ಹಿಡಿದುಕೊಂಡು ಗಿರಿಜನರ ಸೇವೆ ಮಾಡುತ್ತಾ, 'ಇರುವುದೊಂದೇ ಭೂಮಿ' ಎಂದು ಜಾಗೃತಿ ಮೂಡಿಸುತ್ತಾ, ಪರಿಸರದ ಸಂರಕ್ಷಣೆಯಲ್ಲಿ ಅವರ ಕೈಹಿಡಿದು ನಾಲ್ಕಾರು ಹೆಜ್ಜೆ ಮುನ್ನಡೆಸುತ್ತಾ ಮಾಗಿರುವ ಈ ಜೀವಕ್ಕೆ ದಣಿವು ಎನ್ನುವುದೇ ಇಲ್ಲ!

ಮಧ್ಯಪ್ರದೇಶದ ಬುಡಕಟ್ಟು ಮಹಿಳೆಯರ ಶ್ರೇಯೋಭಿವೃದ್ಧಿಗಾಗಿ 'ಬರ್ಲಿ ಗ್ರಾಮೀಣ ಮಹಿಳೆಯರ ಅಭಿವೃದ್ಧಿ ಸಂಸ್ಥೆ' ಕಟ್ಟಿ, ಅದರ ಮೂಲಕ 500 ಹಳ್ಳಿಗಳ 6000 ಹೆಣ್ಣುಮಕ್ಕಳಿಗೆ ಶಿಕ್ಷಣದ ದೀಕ್ಷೆಯನ್ನು ಕೊಟ್ಟವರು ಈ ಅಜ್ಜಿ. ಒಲೆಯ ಉರುವಲಿಗಾಗಿ ಕಾಡಿನಲ್ಲಿ ಕಿಲೊಮೀಟರ್‌ಗಟ್ಟಲೆ ಅಲೆಯುತ್ತಿದ್ದ ಯುವತಿಯರನ್ನು ಕಂಡು ಅವರು ಮಮ್ಮಲ ಮರುಗಿದರು. ಕಾಡಿನಲ್ಲಿ ಕಟ್ಟಿಗೆ ಆಯುವಾಗ ಆ ಯುವತಿಯರು ಎದುರಿಸುತ್ತಿದ್ದ ಅತ್ಯಾಚಾರ, ತಲೆಯ ಮೇಲಿನ ಕಟ್ಟಿಗೆಯ ಭಾರದಿಂದ ಅನುಭವಿಸುತ್ತಿದ್ದ ಗರ್ಭಪಾತದಂತಹ ಸಂಕಷ್ಟದ ಕಥೆಗಳನ್ನು ಕೇಳಿ, ವ್ಯಾಕುಲಗೊಂಡು ಅವರಿಗಾಗಿ ಏನಾದರೂ ಮಾಡಬೇಕಲ್ಲ ಎಂದು ಚಿಂತಿಸತೊಡಗಿದರು. ಅವರ ಆ ಚಿಂತನೆಯ ಫಲವೇ ದೇಸಿ ಸೊಗಡಿನ ಸೋಲಾರ್ ಕುಕ್ಕರ್ ಆವಿಷ್ಕಾರ. ಐದುನೂರು ಹಳ್ಳಿಗಳ ಮನೆ–ಮನೆ ಅಂಗಳದಲ್ಲಿಯೂ ಸೋಲಾರ್ ಕುಕ್ಕರ್‌ಗಳು 'ಸೀಟಿ' ಹೊಡೆಯತೊಡಗಿದವು. ಹಾಗೆ ಹೆಣ್ಣುಮಕ್ಕಳ 'ಹೊರೆ' ಇಳಿಸಿ, ಅವರು ಸ್ವ–ಉದ್ಯೋಗ ಕಂಡುಕೊಳ್ಳಲು, ಸ್ವಾವಲಂಬಿಗಳಾಗಲು ಬೆಂಗಾವಲಾಗಿ ನಿಂತರು.

ಜನಕ್ ಅಜ್ಜಿ ಈ ಸಾಹಸ ಮೆರೆದಿದ್ದು 1980ರಿಂದ 2010ರ ಅವಧಿಯಲ್ಲಿ. ಹಳ್ಳಿಗಳಿಗೆ ಸರಿಯಾಗಿ ಬಸ್‌ಗಳಿಲ್ಲದ, ವಿದ್ಯುತ್ ಇಲ್ಲದ, ಮೊಬೈಲ್–ಟೆಲಿಫೋನ್‌ನಂತಹ ಸಂಪರ್ಕ ಸಾಧನಗಳೂ ಇಲ್ಲದ ಆ ಕಾಲದಲ್ಲಿ ಈ ಅಜ್ಜಿ ಕಂದೀಲು ಹಿಡಿದುಕೊಂಡು ಹಳ್ಳಿ–ಹಳ್ಳಿ ಸುತ್ತುತ್ತಾ, ರಾತ್ರಿ ಅಂತಹ ಹಳ್ಳಿಗಳಲ್ಲೇ ತಂಗುತ್ತಾ, ಹೆಣ್ಣು ಮಕ್ಕಳಲ್ಲಿ ಜಾಗೃತಿ ಮೂಡಿಸುತ್ತಾ, ಹಾಡಿಗಳಲ್ಲಿ ಕಾಣಿಸಿಕೊಂಡ ರೋಗಗಳ ಕುರಿತು ಸರ್ಕಾರಕ್ಕೆ ಮಾಹಿತಿ ನೀಡಿ, ಚಿಕಿತ್ಸೆಯ ವ್ಯವಸ್ಥೆಯನ್ನೂ ಮಾಡುತ್ತಾ ಆದಿವಾಸಿಗಳ ಬದುಕಿನಲ್ಲಿ ಬದಲಾವಣೆ ತಂದದ್ದೊಂದು ಸದ್ದಿಲ್ಲದ ಕ್ರಾಂತಿ. 'ಬರ್ಲಿ ಗ್ರಾಮೀಣ ಮಹಿಳೆಯರ ಅಭಿವೃದ್ಧಿ ಸಂಸ್ಥೆ'ಯ ಅನನ್ಯ ಸಾಧನೆಯ ಕಥೆಯನ್ನು ಕೇಳಿ ತಿಳಿದುಕೊಂಡ ಇಂಗ್ಲೆಂಡ್‌ನ ನಾಗರಿಕ ಜಿಮ್ಮಿ ಮೆಗಿಲಿಗನ್ ಅವರು ಭಾರತಕ್ಕೆ ಬಂದು, ತಾವೂ ಆ ಸಂಸ್ಥೆಯ ಜತೆ ಕೈಜೋಡಿಸುವುದಾಗಿ ಕೇಳಿಕೊಂಡರು. ಜನಕ್ ಅವರು, ಜಿಮ್ಮಿ ಅವರನ್ನು ಸಂಸ್ಥೆಯ ಮ್ಯಾನೇಜರ್ ಆಗಿ ಸೇರಿಸಿಕೊಂಡರು. ವಾಸ್ತವವಾಗಿ, ಸೌರಶಕ್ತಿಯ ದೇಸಿ ಸಾಧನಗಳ ಆವಿಷ್ಕಾರಕ್ಕೆ ನಾಂದಿ ಹಾಡಿದವರು ಈ ಜಿಮ್ಮಿ.

ಸಾಮಾಜಿಕ ಕಾರ್ಯಕ್ಕೆ ಟೊಂಕಕಟ್ಟಿ ನಿಂತವರು, ಕೈ–ಕೈ ಹಿಡಿದು ಬಾಳಸಂಗಾತಿಗಳೂ ಆದರು. ಆದಿವಾಸಿಗಳನ್ನೇ ತಮ್ಮ ಮಕ್ಕಳೆಂದು ಭಾವಿಸಿದ್ದರಿಂದ, ಸ್ವಂತ ಮಕ್ಕಳನ್ನು ಹೊಂದುವ ಅಭಿಲಾಷೆಯನ್ನು ತೊರೆದರು. ಇಂದೋರ್‌ನಿಂದ ತುಸು ದೂರದ ಸನಾವದಿಯಾ ಎಂಬ ಪುಟ್ಟ ಹಳ್ಳಿಯಲ್ಲಿ ಈ ಜೋಡಿಯ 'ಗಿರಿದರ್ಶನ' ಮನೆ ಇದೆ. ಜಿಮ್ಮಿ ಎಷ್ಟೊಂದು ಸ್ವಾವಲಂಬಿ ಎಂದರೆ ಪಾಯ ತೋಡುವುದರಿಂದ ಹಿಡಿದು ಗೋಡೆ ಕಟ್ಟುವವರೆಗೆ ಆ ಮನೆಯನ್ನು ಒಬ್ಬಂಟಿಯಾಗಿ ನಿರ್ಮಿಸಿದರು. ಚಾವಣಿ ಹಾಕುವ ಕೆಲಸ ಬಾಕಿ ಇದ್ದಾಗ ರಸ್ತೆ ಅಪಘಾತವೊಂದರಲ್ಲಿ ಸಾವನ್ನಪ್ಪಿದರು. ಜನಕ್ ಅವರ ಶಿಷ್ಯಬಳಗ ಮನೆಯನ್ನು ಪೂರ್ತಿ ಮಾಡಿಕೊಟ್ಟಿತು. ಮನೆ ನಿರ್ಮಾಣದ ಮುನ್ನವೇ ಅಲ್ಲೊಂದು ಪವನ ವಿದ್ಯುತ್ ಘಟಕ ಸ್ಥಾಪಿಸಿದ ಈ ಜೋಡಿ, ಸುತ್ತಲಿನ ಹಳ್ಳಿಗಳ ಐವತ್ತು ಮನೆಗಳಿಗೆ ಉಚಿತವಾಗಿ ವಿದ್ಯುತ್ ಕೊಟ್ಟಿದೆ. ಊರಿನ ಬೀದಿಗಳಿಗೆ ದೀಪಗಳನ್ನೂ ಅಳವಡಿಸಿದೆ. ಅದೂ ಸರ್ಕಾರದಿಂದ ನಯಾಪೈಸೆಯನ್ನೂ ಪಡೆಯದೆ!

ಸನಾವದಿಯಾ ಹಳ್ಳಿಯಲ್ಲಿ ಜನಕ್ ಅವರಿಗೆ ಇರುವುದು ಅರ್ಧ ಎಕರೆ ಜಮೀನು. ಪಕ್ಕದ ರೈತರೊಬ್ಬರು ಇನ್ನೂ ಅರ್ಧ ಎಕರೆ ಜಮೀನನ್ನು ಇವರಿಗೆ ಬಳಸಲು ನೀಡಿದ್ದಾರೆ. ಆ ಜಮೀನಿನಲ್ಲಿ ದವಸ–ಧಾನ್ಯಗಳನ್ನು, ಸಾಂಬಾರ ಪದಾರ್ಥಗಳನ್ನು, ಸೊಪ್ಪು–ತರಕಾರಿಗಳನ್ನು ಈ ಅಜ್ಜಿ ಬೆಳೆಯುತ್ತಾರೆ. ಸಕ್ಕರೆ, ಉಪ್ಪು, ಎಣ್ಣೆ ಮತ್ತು ಚಹಾದ ಎಲೆಯನ್ನು ಹೊರತುಪಡಿಸಿ ಬೇರೆ ಏನನ್ನೂ ಖರೀದಿಸುವುದಿಲ್ಲ. ಹೀಗಾಗಿ ಅವರದು 'ಜೀರೊ ವೇಸ್ಟ್' ಮನೆ. ಏಕಬಳಕೆಯ ಪ್ಲಾಸ್ಟಿಕ್‌ಅನ್ನು ತಮ್ಮೂರಿನತ್ತ ಸುಳಿಯಲೂ ಅವರು ಬಿಟ್ಟಿಲ್ಲ. 'ಎಲ್ಲಿ ಕೊಳ್ಳುಬಾಕ ಸಂಸ್ಕೃತಿ ಇರುತ್ತದೋ ಅಲ್ಲಿ ಕಸ ಠಿಕಾಣಿ ಹೂಡುತ್ತದೆ. ನಾನು ಬಜಾರದಿಂದ ಏನನ್ನೂ ಖರೀದಿಸುವುದಿಲ್ಲ. ಆದ್ದರಿಂದ ನನ್ನ ಮನೆಯಲ್ಲಿ ತ್ಯಾಜ್ಯವೇ ಇಲ್ಲ' ಎಂದು ಹೆಮ್ಮೆಯಿಂದ ಹೇಳುತ್ತಾರೆ. ಮಳೆ ನೀರಿನ ಸಂಗ್ರಹವೊಂದನ್ನೇ ಜಲಮೂಲವಾಗಿ ಹೊಂದಿದ್ದಾರೆ.

ಹೌದುss, ಈ ಅಜ್ಜಿ ಇಷ್ಟೊಂದು ನಿಸ್ವಾರ್ಥವಾಗಿ ಪರಿಸರ ಮತ್ತು ಸಮಾಜ ಸೇವೆಗೆ ಇಳಿದಿದ್ದು ಏಕೆ? ಅಜ್ಜಿ ಕೊಡುವ ಉತ್ತರ ಕಣ್ಣಲ್ಲಿ ಹನಿ ಜಿನುಗುವಂತೆ ಮಾಡುತ್ತದೆ. ಅವರ ಮೇಲೆ ಅಭಿಮಾನ ಉಕ್ಕೇರುವಂತೆಯೂ ಮಾಡುತ್ತದೆ. ಹದಿನೇಳರ ಹರೆಯದಲ್ಲಿದ್ದಾಗ ವಿರಳ ಹೃದಯಕಾಯಿಲೆಯಿಂದ ಬಳಲಿದ್ದರು ಅವರು. 'ಈ ಹುಡುಗಿ ಹೆಚ್ಚು ದಿನ ಬದುಕುವುದಿಲ್ಲ. ತೆರೆದ ಹೃದಯ ಶಸ್ತ್ರಚಿಕಿತ್ಸೆ ನಡೆಸಿದರೆ ಉಳಿದರೂ ಉಳಿಯಬಹುದು' ಎಂಬ ವೈದ್ಯರ ಸಲಹೆಯಿಂದ ಉತ್ತೇಜಿತರಾಗಿ ಅವರ ತಂದೆ–ತಾಯಿ ಚಿಕಿತ್ಸೆ ಕೊಡಿಸಿದ್ದೇ ತಡ, ಜನಕ್ ಮರುಹುಟ್ಟು ಪಡೆದರು. 'ನನ್ನ ಆಯುಷ್ಯವು ಶಸ್ತ್ರಚಿಕಿತ್ಸೆ ಮುನ್ನವೇ ಮುಗಿದುಹೋಗಿತ್ತು. ಈಗ ಸಿಕ್ಕಿರುವುದು ಬೋನಸ್. ಭೂತಾಯಿ ಮತ್ತು ಸಮಾಜ ಸೇವೆಯಲ್ಲಿ ಈ ಬೋನಸ್ ಆಯುಷ್ಯವನ್ನು ವಿನಿಯೋಗಿಸಬೇಕು' ಎಂದು ಆಕೆ ಒಂದು ದಿನ ಮನೆ ತೊರೆದು ಹೊರಬಿದ್ದರು. ಹಾಗೆ ಹೊರಬೀಳುವ ಮುನ್ನ ಅವರು ಹೈಕೋರ್ಟ್‌ನಲ್ಲಿ ಅನುವಾದಕಿಯಾಗಿದ್ದರು.

ಅರವತ್ತರ ಹರೆಯದಲ್ಲಿ ಅವರಿಗೆ ಮತ್ತೊಂದು ಅಗ್ನಿಪರೀಕ್ಷೆ ಎದುರಾಯಿತು. ಕ್ಯಾನ್ಸರ್ ಇರುವುದು ಗೊತ್ತಾಗಿ, ನಾಲ್ಕು ಶಸ್ತ್ರಚಿಕಿತ್ಸೆಗಳಿಗೆ ಒಳಗಾಗಿ ಅದರಿಂದಲೂ ಯಶಸ್ವಿಯಾಗಿ ಪಾರಾದರು. ಮುಂದೆ ಪತಿ ಜಿಮ್ಮಿ ಜೊತೆ ಪಯಣಿಸುತ್ತಿದ್ದಾಗ ರಸ್ತೆ ಅಪಘಾತ ಸಂಭವಿಸಿ, ಪತಿ ಅಸುನೀಗಿದರು. ಅಜ್ಜಿ ತೀವ್ರವಾಗಿ ಗಾಯಗೊಂಡು ಕೋಮಾ ಸ್ಥಿತಿಗೆ ತಲುಪಿದರೂ ಚೇತರಿಸಿಕೊಂಡು ಬಂದರು. ಮತ್ತೆ ಅದೇ ಜೀವನೋತ್ಸಾಹದಿಂದ ತನ್ನ, 75ರ ಈ ಹರೆಯದಲ್ಲೂ ನಿಸರ್ಗದ ಅವಿಶ್ರಾಂತ ರಾಯಭಾರಿಯಾಗಿ ಪ್ರತಿದಿನ ಪಾಠ ಮಾಡುತ್ತಲೇ ಇದ್ದಾರೆ. ಅವರ ಜೀವನದಿಂದ ಒಂದು ಪಾಠ ಕಲಿತಿದ್ದಾದರೂ ಅದು ನಾವು ಅವರಿಗೆ ಸಲ್ಲಿಸುವ ಗೌರವವೇ ಆಗಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65